**<u>ದಿನಾಂಕ: 05.12.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು:</u>**
**<u>ಪಾಟೀ ಸವಾಲು: ಎದುರುದಾರರ ಪರ ವಕೀಲರಾದ ಶ್ರೀ.MSG ರವರಿಂದ:</u>**

1) ನನ್ನ ಗಂಡನು ಮರಣ ಹೊಂದಿದ ದಿನಕ್ಕಿಂತ ಸುಮಾರು 3 ವರ್ಷಗಳ ಹಿಂದಿನಿಂದಲೂ Intellirose Software India Pvt Ltd., ಎಂಬ ಸಂಸ್ಥೆಯಲ್ಲಿ ನನ್ನ ಗಂಡನು ಕೆಲಸ ಮಾಡುತ್ತಾ ಇದ್ದರು.

2) ದಿ.30.06.2024 ರಂದೂ ಸಹಾ ನನ್ನ ಗಂಡನು ಅದೇ ಕಂಪನಿಯಲ್ಲಿ ನೌಕರರು ಆಗಿದ್ದರು.

3) ನನ್ನ ಗಂಡನ ಚಿಕಿತ್ಸೆಗಾಗಿ ನಾವು ಖರ್ಚು ಮಾಡಿರುವ ಹಣಕ್ಕೆ ಸಂಬಂಧಿಸಿದಂತೆ ಸದರಿ Intellirose Software India Pvt Ltd., ಸಂಸ್ಥೆಯವರು ನಮಗೆ ಯಾವುದೇ ಹಣವನ್ನು ನೀಡಿರುವುದಿಲ್ಲ. ಸದರಿ ಸಂಸ್ಥೆಯವರು ನನ್ನ ಗಂಡನ ಹೆಸರಿನಲ್ಲಿ ಯಾವುದೇ ಆರೋಗ್ಯ ವಿಮೆಯನ್ನು ಮಾಡಿಸಿರಲಿಲ್ಲ.

4) ಪ್ರತಿಯೊಂದು ಸಂಸ್ಥೆಯವರು ಅದರಲ್ಲಿಯೂ ವಿಶೇಷವಾಗಿ Software ಸಂಸ್ಥೆಯವರು ತಮ್ಮ ನೌಕರ ವೃಂದಕ್ಕೆ ಕಡ್ಡಾಯವಾಗಿ ಆರೋಗ್ಯ ವಿಮೆ ಮಾಡಿಸುತ್ತಾರೆ ಮತ್ತು ಈ ಬಗ್ಗೆ ನಾನು ಈ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಾ ಇದ್ದೇನೆ ಎಂದರೆ ಸುಳ್ಳು.

5) ಅಪಘಾತವು ಆದಂತಹ ಸಮಯದಲ್ಲಿ ನನ್ನ ಗಂಡನು ತಮ್ಮ ದ್ವಿಚಕ್ರ ವಾಹನವನ್ನು Empire Hotel ಕಡೆಯಿಂದ ಮರಿಯಪ್ಪ ಜಂಕ್ಷನ್ ಕಡೆಗೆ ಚಾಲನೆ ಮಾಡುತ್ತಾ ಇದ್ದರು, ಆದರೆ ಅದು ಯಾವ ದಿಕ್ಕು ಎಂದು ಹೇಳಲು ಸಾಧ್ಯವಿಲ್ಲ. Empire Hotel ನ ಉತ್ತರ ದಿಕ್ಕಿಗೆ ಮರಿಯಪ್ಪ ಜಂಕ್ಷನ್

ಬರುತ್ತದೆ ಎಂದರೆ ಇರಬಹುದು ಆದರೆ ನನಗೆ ಹೇಳಲು ತಿಳಿಯುವುದಿಲ್ಲ.

6) ನನ್ನ ಗಂಡನು ಚಾಲನೆ ಮಾಡುತ್ತಾ ಇದ್ದ ವಾಹನವು Entrq RT EDS Scooter ಆಗಿದೆ. ಅಪಘಾತವು ಆಗುವ ದಿನದ ವೇಳೆಗೆ ಸದರಿ ಸ್ಕೂಟರ್ ಸುಮಾರು 7 ವರ್ಷ ಹಳೆಯ ವಾಹನ ಆಗಿತ್ತು. ಅಪಘಾತದ ಸಮಯದಲ್ಲಿ ನನ್ನ ಗಂಡನ ಬಳಿ ಯಾವುದೇ ಚಾಲನಾ ಪರವಾನಗಿಯು ಇರಲಿಲ್ಲ ಎಂದರೆ ಸುಳ್ಳು. ನನ್ನ ಗಂಡನ ಬಳಿ ಚಾಲನಾ ಪರವಾನಗಿ ಇರಲಿಲ್ಲ ಮತ್ತು ಈ ಬಗ್ಗೆ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಾ ಇದ್ದೇನೆ ಎಂದರೆ ಸುಳ್ಳು. ನನ್ನ ಗಂಡನ ಚಾಲನಾ ಪರವಾನಗಿಯನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ.

7) ಅಪಘಾತವು ಆದಂತಹ ದಿನದಂದು ನಾವು ರಾತ್ರಿಯ ಊಟ ಮಾಡುವ ಸಲುವಾಗಿ ಹೋಟೆಲ್ ಗೆ ಹೋಗಿದ್ದೆವು.

8) ನನ್ನ ಗಂಡನು ನಮ್ಮ ದ್ವಿಚಕ್ರ ವಾಹನವನ್ನು ಚಾಲನೆ ಮಾಡುತ್ತಾ ಇದ್ದಂತಹ ಸಮಯದಲ್ಲಿ ಯಾವುದೋ ಅಪರಿಚಿತ ವ್ಯಕ್ತಿಯು ರಸ್ತೆಯನ್ನು ಎಡದಿಂದ ಬಲಗಡೆಗೆ ದಾಟಲು ಪ್ರಯತ್ನ ಮಾಡಿದ್ದಾನೆ ಎಂದರೆ ಸುಳ್ಳು.

9) ಮೇಲೆ ನನಗೆ ಸೂಚಿಸಿದ ಹಾಗೆ ಘಟನೆಯು ಆಗಿದೆ ಮತ್ತು ಓರ್ವ ವ್ಯಕ್ತಿಯು ರಸ್ತೆಯನ್ನು ದಾಟಲು ಪ್ರಯತ್ನ ಮಾಡಿದ್ದಾನೆ ಮತ್ತು ಆ ವ್ಯಕ್ತಿಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸುವ ಸಲುವಾಗಿ ನನ್ನ ಗಂಡನು ತನ್ನ ವಾಹನವನ್ನು ಏಕಾ ಏಕಿ ರಸ್ತೆಯ ಬಲಗಡೆಗೆ ಚಾಲನೆ ಮಾಡಿದ್ದಾರೆ ಮತ್ತು ಆ ಸಂದರ್ಭದಲ್ಲಿ ಕೆಎ-03-ಹೆಚ್.ಕ್ಯು-4013 ಸಂಖ್ಯೆಯ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆಸಿದ್ದಾರೆ ಮತ್ತು ಆ ಅಪಘಾತವು ನನ್ನ ಗಂಡನ ಅಜಾಗರೂಕತೆಯಿಂದಲೇ ಆಗಿದೆ ಎಂದರೆ ಸುಳ್ಳು.

10) ಅಪಘಾತವು ಸಂಭವಿಸುವುದಕ್ಕೆ ಮೇಲೆ ಹೇಳಿದ ಕೆಎ-03-ಹೆಚ್.ಕ್ಯು-

4013 ಸಂಖ್ಯೆಯ ದ್ವಿಚಕ್ರ ವಾಹನದ ಚಾಲಕನ ತಪ್ಪು ಅಥವಾ ನಿರ್ಲಕ್ಷ್ಯತನ ಕಾರಣ ಆಗಿರುವುದಿಲ್ಲ ಎಂದರೆ ಸುಳ್ಳು.

11) ಅಪಘಾತದ ಸಮಯದಲ್ಲಿ ನಾನಾಗಲೀ ಅಥವಾ ನನ್ನ ಗಂಡ ಆಗಲೀ ಹೆಲ್ಮೆಟ್ ಹಾಕಿಕೊಂಡಿರಲಿಲ್ಲ ಎಂದರೆ ಸುಳ್ಳು.

12) ಪ್ರಥಮ ವರ್ತಮಾನ ವರದಿಯಲ್ಲಿ ಅಂದರೆ ನಿ.ಪಿ.1 ದಾಖಲೆಯಲ್ಲಿ ಏನು ಬರೆದಿದೆ ಎಂದು ನನಗೆ ತಿಳಿದಿದೆ. ಅಪಘಾತವು ಸಂಭವಿಸುವುದಕ್ಕೆ ನನ್ನ ಗಂಡನ ಅಜಾಗರೂಕತೆಯೂ ಸಹಾ ಕಾರಣವಾಗಿದೆ ಎಂಬುದಾಗಿ ನಿ.ಪಿ.1 ದಾಖಲೆಯಲ್ಲಿ ಬರೆಯಲಾಗಿದೆ ಎಂದರೆ ಸುಳ್ಳು.

13) ನಿ.ಪಿ.4 ದಾಖಲೆಯಲ್ಲಿ ಅಂದರೆ ಅಂತಿಮ ವರದಿಯಲ್ಲಿ ನನ್ನ ಗಂಡನನ್ನು ಮತ್ತು ನನ್ನನ್ನು ಮತ್ತು ಕೆಎ-03-ಹೆಚ್.ಕ್ಯು-4013 ಸಂಖ್ಯೆಯ ದ್ವಿಚಕ್ರ ವಾಹನದ ಮಾಲೀಕ ಮತ್ತು ಚಾಲಕನನ್ನು ಆರೋಪಿಗಳನ್ನಾಗಿ ತೋರಿಸಲಾಗಿದೆ ಎಂದರೆ ಸರಿ.

14) ನಿ.ಪಿ.4 ರಲ್ಲಿ ನನ್ನ ಗಂಡನು ಅಜಾಗರೂಕತೆಯಿಂದ ಚಾಲನೆ ಮಾಡಿದ್ದಾರೆ ಮತ್ತು ನಾನು ಮತ್ತು ನನ್ನ ಗಂಡನು ಹೆಲ್ಮೆಟ್ ಹಾಕಿಕೊಂಡಿರಲಿಲ್ಲ ಮತ್ತು ನನ್ನ ಗಂಡನ ಬಳಿ ಚಾಲನಾ ಪರವಾನಗಿ ಇರಲಿಲ್ಲ ಎಂದು ಹೇಳಲಾಗಿದೆ ಎಂದರೆ ಅದು ಸುಳ್ಳು ಆರೋಪ ಆಗಿದೆ.

15) ಪೊಲೀಸರ ಜೊತೆ ಮಾತನಾಡಿ ನಮಗೆ ಅನುಕೂಲ ಆಗುವ ಹಾಗೆ ಪೊಲೀಸರಿಂದ ಪಂಚನಾಮೆಯನ್ನು ನಾವು ಬರೆಸಿಕೊಂಡಿದ್ದೇವೆ ಎಂದರೆ ಸುಳ್ಳು.

16) ನಿ.ಪಿ.6 ರಲ್ಲಿ ಇರುವ ಮಾಹಿತಿಯ ಪ್ರಕಾರ ನನ್ನ ಗಂಡನು ಓಡಿಸುತ್ತಾ ಇದ್ದ ದ್ವಿಚಕ್ರ ವಾಹನ ಮತ್ತು ಕೆಎ-03-ಹೆಚ್.ಕ್ಯು-4013 ಸಂಖ್ಯೆಯ ವಾಹನವು

ರಸ್ತೆಯ ಮಧ್ಯಭಾಗದಲ್ಲಿ ಮುಖಾ ಮುಖಿ ಡಿಕ್ಕಿ ಹೊಡೆದಿವೆ ಎಂದು ಬರೆದಿದ್ದಾರೆ ಎಂದರೆ ಸುಳ್ಳು.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೇಳಿದ್ದಾರೆ. ಸಮಯ ನೀಡಿದೆ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.